## ಚಾನೆಲ್‌ಗಳಲ್ಲಿ ವೈವಿಧ್ಯತೆ

'ಇಂಚರ'ದಲ್ಲಿ ಹಿಂದಿ ಕಲೆಕ್ಷನ್ಸ್ ಸಾಂಗ್ಸ್ ಬರುತ್ತಿದೆ. 'ಜನಶ್ರೀ'ಯಲ್ಲಿ ಒಂದೊಳ್ಳೆ ಕೆಲಸ ಟ್ಯಾಗ್‌ಲೈನ್ ಆಗಿ ಖುಷಿ ಹಂಚುವ ಅಭಿಯಾನ ಬರುತ್ತಿದೆ. ದುಡಿದಾದರೂ ತಿನ್ನುತ್ತೇವೆ. ಬೇಡಿ ತಿನ್ನುವುದಿಲ್ಲ ಎನ್ನುವ ಸ್ವಾಭಿಮಾನಿ ವ್ಯಕ್ತಿಗಳನ್ನು ಸಂದರ್ಶಿಸಿ ಖುಷಿ ಹಂಚುವ ಅಭಿಯಾನ ನಡೆಯುತ್ತಿದೆ. ಹಂಗಿನ ಕೂಳು ಅರಸದೆ ಛಲದಿಂದ ಬದುಕುವ ವ್ಯಕ್ತಿಗಳ ಪರಿಚಯ ಒಂದೊಳ್ಳೆ ಕೆಲಸ. ಏನಂತಿರಿ. 'ಸರಳ ಜೀವನ'ದ ವೈಡ್‌ಆ್ಯಂಗಲ್‌ನಲ್ಲಿ ವಿಸ್ಮಯಕಾರಿ ಸಂಗತಿಗಳನ್ನು ತಿಳಿಸಲಾಗುತ್ತಿದೆ. ಇದೇ ಚಾನೆಲ್‌ನಲ್ಲಿ ನಾವು ನಮ್ಮವರನ್ನು ಅರಿತಂತಾಗುತ್ತಿದೆ.

—ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ನಿಲ್ಲಬಾರದಿತ್ತು ಅವಲೋಕನ

ಇತ್ತೀಚೆಗೆ ಬೆಂಗಳೂರು ದೂರದರ್ಶನ ಕೇಂದ್ರ ಪ್ರಸಾರ ಮಾಡುವ ಕಾರ್ಯಕ್ರಮಗಳು ತೀರಾ ಬೇಸರ ತರುತ್ತಿವೆ. ಟಿವಿ ವೀಕ್ಷಕರಿಗೆ ಯಾವುದೇ ಮನರಂಜನೆ ನೀಡುತ್ತಿಲ್ಲ. ಈ ಹಿಂದೆ 1996 ರಿಂದ 2004 ರವರೆಗೆ ಪ್ರತಿ ಗುರುವಾರ ಸಂಜೆ 6ಕ್ಕೆ 'ಅವಲೋಕನ' ಎಂಬ ರಸಪ್ರಶ್ನೆ ಕಾರ್ಯಕ್ರಮ ಪ್ರಸಾರ ಮಾಡಿ ಜನಪ್ರಿಯವಾಗಿತ್ತು, ಈ ಅವಲೋಕನ ರಸಪ್ರಶ್ನೆಯ ಕಾರ್ಯಕ್ರಮವನ್ನು ವಾರ್ತಾ ಇಲಾಖೆಯ ಸಹಯೋಗದೊಂದಿಗೆ ನಿರ್ಮಿಸಿ, ನಾಡಿನ ಕಲೆ, ನೆಲೆ, ಸಾಹಿತ್ಯ, ಇತಿಹಾಸ, ಚಲನಚಿತ್ರ, ಸರ್ಕಾರದ ಅಭಿವೃದ್ಧಿ ಸಾಧನೆ ಬಗ್ಗೆ ಪ್ರಶ್ನೆ ನಮಗೆ ಕೇಳಿ, ವೀಕ್ಷಕರಿಂದ ಸರಿಯುತ್ತರವನ್ನು ಅಂಚೆಕಾರ್ಡಿನ ಮುಖೇನ ಪಡೆದು ಸರಿಯುತ್ತರ ಬರೆದ ವೀಕ್ಷಕರ ಕಾರ್ಡಿನ ಗುಡ್ಡೆಯನ್ನು ಲಾಟರಿ ಮುಖೇನ ಆರಿಸಿ, ವಿಜೇತರಿಗೆ 3 ಸಾವಿರದಿಂದ 1 ಸಾವಿರದವರೆಗೆ ಬಹುಮಾನ ನೀಡುತ್ತಿತ್ತು ಇಂತಹ ಜನಪ್ರಿಯ ರಸಪ್ರಶ್ನೆ ಕಾರ್ಯಕ್ರಮವನ್ನು ನಿಲ್ಲಿಸಲು ಕಾರಣವೇನು?

—ಸುರೇಶ್, ಭದ್ರಾವತಿ

## ಉದ್ಧಟತನಕ್ಕೆ ಮಿತಿ ಇಲ್ಲವೆ?

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಪದ್ಮಾವತಿ' ಧಾರಾವಾಹಿ ಈಗಿನ ಕಾಲಕ್ಕೆ ಸರಿಹೊಂದುವುದಿಲ್ಲ. ಶಂಭು ಹಾಗೂ ಅವನ ತಾಯಿ, ಪದ್ಮಾವತಿ ಕುಟುಂಬದೊಡನೆ ವ್ಯವಹರಿಸುವ ರೀತಿ. ಮೈ ಉರಿಯುವಂತೆ ಮಾಡುತ್ತದೆ. ಗಂಡಿನ ತಾಯಿ, ಮಗನ ಮದುವೆ ಇನ್ನು ನಡೆದೇ ಇರುವುದಿಲ್ಲ ಆಗಲೆ ನಡೆಸುವ ದಬ್ಬಾಳಿಕೆ ಯಾವ ಹೆಣ್ಣು ಹೆತ್ತವರೂ ಸಹಿಸುವುದಿಲ್ಲ. ಕೆಲವೊಮ್ಮೆ ಪದ್ಮಾವತಿಯ ತಂದೆ ಕೆರಳಿದರೂ ಮಿಕ್ಕ ಸಮಯದಲ್ಲಿ ಮೌನದಿಂದ ಇರುವುದನ್ನು ನೋಡಿದರೆ. ಇವರು ಸ್ವಾಭಿಮಾನಿ ತಂದೆ ಎನಿಸಲಾರದು. ಇನ್ನು ಎಲ್ಲಾ ರೀತಿಯಲ್ಲೂ ಪದ್ದುಗೆ ಸಹಾಯ ಮಾಡುವ ತಾಯಿ ಈ ವಿಷಯದಲ್ಲಿ ಶಂಭುವಿನ ತಾಯಿಗೆ ಶಿಕ್ಷೆ ವಿಧಿಸದೆ ಇರುವುದು ನೋಡಿದರೆ ಸ್ವತಃ ತಾಯಿ ಪದ್ಮಾವತಿಗೂ ಶಂಭು ತಾಯಿಯ ಬಗ್ಗೆ ಭಯವಿರಬಹುದು ಎನಿಸುತ್ತದೆ. ಶಂಭುವಿನ ತಾಯಿಯ ನಡವಳಿಕೆ, ಕೂಗಾಟ, ಮಿತಿಮೀರಿದ ಸಂಭಾಷಣೆ ಅತಿ ಉದ್ಧಟತನ ಎನಿಸುತ್ತದೆ. ಅಷ್ಟೆ ಅಲ್ಲ ಅವಳ ಬಗ್ಗೆ ಜಿಗುಪ್ಸೆ ಉಂಟಾಗುತ್ತದೆ. ಈ ಧಾರಾವಾಹಿಯಲ್ಲಿ ನಾಯಕ ಸಾಮ್ರಾಟನ ಅಜ್ಜಿಯ ಬಗ್ಗೆಯೂ ತಿರಸ್ಕಾರ ಮನೋಭಾವ ಉಂಟಾಗುತ್ತದೆ. ಕಾರಣ ಮೊಮ್ಮಕ್ಕಳ ಬಗ್ಗೆ ನಡೆದುಕೊಳ್ಳುವ ರೀತಿ. ನಾಯಕಿ ಪದ್ದು ತಾಯಿ ಪದ್ಮಾವತಿ ಬಗ್ಗೆ ಇಟ್ಟಿರುವ ಅತಿಯಾದ ನಂಬಿಕೆ ಕೆಲವೊಮ್ಮೆ ಹೀಗೂ ಉಂಟೆ ಎನಿಸುತ್ತದೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ವಾರದ ಪತ್ರ

## ಸಂಶಯದ ಸುಳಿಯಲ್ಲಿ ವಾಹಿನಿಗಳು

ಬೆದರಿಕೆ ಮತ್ತು ಬಲವಂತ ಸುಲಿಗೆಯ (Blackmail and Extortion) ಆರೋಪದ ಮೇಲೆ ಒಂದು ಸುದ್ದಿ ವಾಹಿನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಬಂಧನ ಕೆಲವು ಸುದ್ದಿವಾಹಿನಿಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವಂತೆ ಮಾಡಿದೆ ಮತ್ತು ಅವುಗಳು ನೀಡುವ ಸುದ್ದಿಯನ್ನು ಡಿಸ್ಕೌಂಟ್ ಮಾಡಿ ತೆಗೆದುಕೊಳ್ಳುವಂತೆ ಅಥವಾ ಸಂದೇಹದ ಸುಳಿಯಲ್ಲಿ ನೋಡುವಂತೆ ಮಾಡಿದೆ. ಸುದ್ದಿ ವಾಹಿನಿಗಳು ಪಾವತಿ ಸುದ್ದಿ (Paid News) ಆರೋಪದಿಂದ ಮುಕ್ತವಾಗಲು ಇನ್ನೂ ಪ್ರಯತ್ನಿಸುತ್ತಿರುವಾಗ, 'ಬೆದರಿಕೆ ಮತ್ತು ಬಲವಂತ ಸುಲಿಗೆ'ಯ ಆರೋಪ, ದೃಶ್ಯ ಮಾಧ್ಯಮ ತಲೆತಗ್ಗಿಸುವಂತೆ ಮಾಡಿದೆ. ಇಂತಹ ಆರೋಪಗಳು ತೀರಾ ಇತ್ತೀಚಿನವರೆಗೆ ವದಂತಿಗಳ ರೂಪದಲ್ಲಿದ್ದು, ಅದು ನೈಜತೆಯ ರೂಪವನ್ನು ಪಡೆಯುತ್ತಿದೆ. ವಿಶ್ವಾಸಾರ್ಹತೆಯನ್ನು ಕಳೆದು ಕೊಳ್ಳುವುದು ಸುಲಭ. ಆದರೆ, ಅದನ್ನು ಪುನಃ ಗಳಿಸುವುದು ಕುಂಬಾರನಿಗೆ ವರುಷ.. ದೊಣ್ಣೆಗೆ ನಿಮಿಷ ಎನ್ನುವಂತೆ. ಮುಂದಿನ ದಿನಗಳಲ್ಲಿ 'ನೀರನ್ನೂ ಜಗಿದು ನುಂಗು' ಎನ್ನುವಂತೆ, ಜನತೆ ದೃಶ್ಯ ಮಾಧ್ಯಮವನ್ನು ನೋಡುವುದನ್ನು ಅಲ್ಲಗೆಳೆಯಲಾಗದು.

ಟಿವಿ ನ್ಯೂಸ್ ಅನ್ನು ಗಂಭೀರವಾಗಿ ತೆಗೆದುಕೊಳ್ಳಲಾರರು. ಯಾರೋ ಒಬ್ಬರು ಮಾಡಿದ ತಪ್ಪನ್ನು ಸಾರ್ವತ್ರಿಕವಾಗಿ ನೋಡಲಾಗದು. ಆದರೂ, ಈ ಆರೋಪ ದೃಶ್ಯ ಮಾಧ್ಯಮದ ತಳವನ್ನೇ ಅಲುಗಾಡಿಸಿದ್ದು ಮಾತ್ರ ವಾಸ್ತವ ಸತ್ಯ.

—ರಮಾನಂದ ಶರ್ಮಾ, ಬೆಂಗಳೂರು

## ನಗು ಹಿಂದಿನ ನೋವು

ಮೊದಲ ಬಾರಿಗೆ ಪ್ರಾಣೇಶ್ ಅವರ ಹಾಸ್ಯ ಕಾರ್ಯಕ್ರಮ ದೂರದರ್ಶನದಲ್ಲಿ ನೋಡಿದಾಗ ಬಿದ್ದು ಬಿದ್ದು ನಕ್ಕಿದ್ದೆವು. 'ಒಂದು ದಳದ ಕಮಲದಲ್ಲಿ' ಎನ್ನುವ ಹಾಸ್ಯ ಚಟಾಕಿ ಮೊದಲು ಕುತೂಹಲ ಹುಟ್ಟಿಸಿ ಕೊನೆಯಲ್ಲಿ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೆವು. ಇಷ್ಟು ದಿನ ಗಂಗಾವತಿ ಪ್ರಾಣೇಶ ಅವರ ಕಾರ್ಯಕ್ರಮ ನೋಡಿದಾಗ ತಾನೂ ನಕ್ಕು ಇನ್ನೊಬ್ಬರನ್ನು ನಗಿಸುಂತಹ ವ್ಯಕ್ತಿ ಎಂದು ತಿಳಿದಿದ್ದೆವು. ಆದರೆ 'ವೀಕೆಂಡ್ ವಿತ್ ರಮೇಶ್'' ಕಾರ್ಯಕ್ರಮ ನೋಡಿದಾಗ, ತಮ್ಮ ನೋವನ್ನೆಲ್ಲಾ ನುಂಗಿ ಇತರರನ್ನು ನಗಿಸುವವರೇ ನಿಜವಾದ ಹಾಸ್ಯ ಕಲಾವಿದರು ಎನ್ನುವ ಮಾತು ನಿಜ ಎನಿಸಿತು.

— ವೀಣಾ ಶಂಕರ್, ಬೆಂಗಳೂರು ರುಕ್ಮಿಣಿ ದೇಶಪಾಂಡೆ, ಗೋಕಾಕ, ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಕಯಿಯಾದ ಮಧುರ...

ಚಂದನದ 'ಮಧುರ ಮಧುರವೀ ಮಂಜುಳ ಗಾನ'ವನ್ನು ಕೇಳಲು ಹೋದರೆ ಪ್ರಾರಂಭದ ಭಾಗದಲ್ಲಿ ಶೀರ್ಷಿಕೆಯ ಗೀತೆಯ ನಂತರ ಕೇವಲ ಇನ್ನೊಂದು ಹಾಡಿಗೆ ಮುಕ್ತಾಯವಾಗುತ್ತೆ. ಮಧ್ಯದಲ್ಲಿ ದೀಪ ಬೆಳಗುವುದರೊಂದಿಗೆ ನಾಡೋಜ ಜೋಷಿಯವರ ಸ್ವಾಗತ ಭಾಷಣವೇ ತುಂಬಿಕೊಂಡಿರುತ್ತೆ. ಅದರಲ್ಲಿ ಬರುವ ಹಾಡುಗಳ ಮೊದಲನೆ ಪಂಕ್ತಿ ಹೇಳುವುದು ಎಷ್ಟು ಸಮಂಜಸ? ಮತ್ತೆ ಬರುವ ಭಾಗಗಳಲ್ಲಿ ಪ್ರತಿ ದಿನವೂ ಸುಮಾರು ಐದು ನಿಮಿಷಗಳ ಕಾಲ ಕಾರ್ಯಕ್ರಮದ ತಯಾರಿ ದೃಶ್ಯಗಳನ್ನು ಪದೇ ಪದೇ ತೋರಿಸುವುದು ಒಂದು ರೀತಿಯಲ್ಲಿ ವಾಕರಿಕೆ ವಾತಾವರಣವನ್ನು ಸೃಷ್ಟಿಸುತ್ತದೆ ಅಂದರೆ ಅತಿಶಯೋಕ್ತಿಯಾಗಲಾರದು!

-ಎಸ್. ಆರ್. ದೇವಪ್ರಕಾಶ್, ತುಮಕೂರು

## ಪಿ.ಬಿ.ಶ್ರೀನಿವಾಸ್ ಬಗ್ಗೆ ಅವಜ್ಞೆ

ಝೀ ಸರಿಗಮಪದಲ್ಲಿ ಆಗೊಮ್ಮೆ ಈಗೊಮ್ಮೆ ಪಿ.ಬಿ.ಶ್ರೀನಿವಾಸ್ ಗೀತೆಗಳನ್ನು ಮನಬಂದಂತೆ ತಿರುಚಿ ಹಾಡುವ ಸ್ಪರ್ಧಿಗಳನ್ನು ಇಂದ್ರ ಚಂದ್ರ ಎಂದು ಹೊಗಳುವ ಭರದಲ್ಲಿ ನಿರೂಪಕಿ ಆಗಲಿ ತೀರ್ಪುಗಾರರಾಗಲಿ ಮೂಲ ಗಾಯಕ ಪಿ.ಬಿ.ಎಸ್ ಹೆಸರನ್ನೂ ಉಲ್ಲೇಖಿಸದೆ ಅವಜ್ಞೆ ತೋರುತ್ತಿದ್ದಾರೆ. ಓರ್ವ ತೀರ್ಪುಗಾರರಂತೂ ಪಿ.ಬಿ.ಎಸ್ ಅವರು ಆಗಾಗ ಹೇಳುತ್ತಿದ್ದ 'ಗಾನೆ ಗಾನೆ ಪೆ ಲಿಖಾ ಹೈ ಗಾನೆವಾಲೆ ಕಾ ನಾಮ್ ' ಎಂಬ ಮಾತನ್ನು ಜೇಸುದಾಸ್ ಅವರ ಬಾಯಿಂದ ಹೇಳಿಸಿದ್ದರು! ಓರ್ವ ಜ್ಯೂರಿ ಮೆಂಬರ್ ಮಾತ್ರ ಒಂದು ಸಲ ಪಿ.ಬಿ.ಎಸ್ ಬಗ್ಗೆ ಮಾತಾಡಿದ್ದನ್ನು ಕೇಳಿದ್ದೇನೆ.

—ಚಿದಂಬರ ಕಾಕತ್ಕರ್, ಮಂಗಳೂರು